ಜೂನ್ 27 ರ ಬೇಸಿಗೆಯ ಒಂದು ಸುಂದರ ಮುಂಜಾನೆ. ಎಲ್ಲೆಲ್ಲೂ ಬಿರಿದ ಹೂಗಳ ಸುಗಂಧ ಗಾಳಿಯಲ್ಲಿ ಹರಡಿತ್ತು. ಹಸಿರುಟ್ಟ ಭೂಮಿ ಕಣ್ಣಿಗೆ ತಂಪೆರಚುತ್ತಿತ್ತು. ಹತ್ತು ಗಂಟೆಯಾಗುತಲಿತ್ತು. ಬ್ಯಾಂಕಿನ ಮತ್ತು ಅಂಚೆ ಕಚೇರಿ ಕಟ್ಟಡಗಳ ಮಧ್ಯದಲ್ಲಿರುವ ಚೌಕದಲ್ಲಿ ಜನ ಸೇರಲಾರಂಭಿಸಿದರು. ಸುತ್ತಮುತ್ತಲ ಊರುಗಳಲ್ಲಿ ಜನಸಂಖ್ಯೆ ಹೆಚ್ಚಿದ್ದರಿಂದ ಜೂನ್ 20ನೇ ತಾರೀಕಿನಂದೇ ಲಾಟರಿ ಎತ್ತುವ ಪ್ರಕ್ರಿಯೆ ಶುರುವಾಗುತ್ತಿತ್ತು. ಅಲ್ಲೆಲ್ಲಾ ಲಾಟರಿ ಮುಗಿಯಲು ಬರೋಬರಿ ಎರಡು ದಿನ ಹಿಡಿಯುತ್ತಿತ್ತು. ಆದರೆ ಇದು ಕೇವಲ ಮುನ್ನೂರು ಜನರಿದ್ದ ಪುಟ್ಟ ಊರು. ಎಲ್ಲವೂ ಎರಡು ಗಂಟೆಗಳಲ್ಲೇ ಮುಗಿದು ಮಧ್ಯಾಹ್ನದ ಊಟಕ್ಕೆ ಜನ ಮನೆ ಸೇರುತ್ತಿದ್ದರು. ಮಕ್ಕಳಿಗೆ ಬೇಸಿಗೆ ರಜೆಗಳು ಶುರುವಾಗಿದ್ದರಿಂದ ಅವರೆಲ್ಲಾ ದೊಡ್ಡವರಿಗಿಂತ ಮೊದಲೇ ಚೌಕದಲ್ಲಿ ನೆರೆದಿದ್ದರು. ಸ್ವಲ್ಪ ಸಮಯ ಸುಮ್ಮನೇ ಇದ್ದ ಮಕ್ಕಳು ಅತ್ತಇತ್ತ ಓಡಲು, ಕೂಗಾಡುತ್ತಾ ಆಡಲು ಶುರುವಿಟ್ಟುಕೊಂಡರು. ಬಾಬ್ಬಿ ಮಾರ್ಟಿನನ ಚಡ್ಡಿ ಜೇಬುಗಳು ಕಲ್ಲುಗಳಿಂದ ತುಂಬಿಕೊಂಡು ತೊಯ್ದಾಡುತ್ತಿದ್ದವು. ಅಷ್ಟರಲ್ಲಿ ಇತರ ಹುಡುಗರೂ ಕಲ್ಲುಗಳನ್ನು ಆಯಲು ಶುರು ಮಾಡಿದರು. ಗುಂಡನೆಯ ನಯವಾದ ಕಲ್ಲುಗಳು. ಬಾಬ್ಬಿ, ಹ್ಯಾರಿ ಮತ್ತು ಡೆಲಾಕ್ರುಜ್ ಹುಡುಗರು ಈಗಾಗಲೇ ಚೌಕದ ಒಂದು ಮೂಲೆಯಲ್ಲಿ ಕಲ್ಲುಗಳ ರಾಶಿಯನ್ನೇ ಒಟ್ಟು ಮಾಡಿ ಬೇರೆ ಹುಡುಗರು ಕದಿಯದಂತೆ ಒಂದು ಕಣ್ಣಿಟ್ಟಿದ್ದರು. ಹೆಣ್ಣು ಮಕ್ಕಳು ತಮ್ಮಷ್ಟಕ್ಕೆ ಮಾತನಾಡುತ್ತಾ ಪ್ರತ್ಯೇಕವಾಗಿ ಗುಂಪು ಕಟ್ಟಿಕೊಂಡು ನಿಂತಿದ್ದರು. ಚಿಕ್ಕ ಮಕ್ಕಳು ಮಣ್ಣಲ್ಲಿ ಆಟವಾಡುತ್ತಲೋ, ತಂತಮ್ಮ ಅಕ್ಕ ಅಣ್ಣಂದಿರ ಲಂಗ, ಶರಟುಗಳಿಗೆ ನೇತಾಡುತ್ತಾ ಸುತ್ತ ಮುತ್ತ ಕಣ್ಣಗಲಿಸಿ ನೋಡುತ್ತಿದ್ದವು.

ಗಂಡಸರ ಸಂಖ್ಯೆ ಹೆಚ್ಚಾಗುತ್ತಲೇ ಇತ್ತು. ಅವರ ಕಣ್ಣುಗಳು ತಂತಮ್ಮ ಮಕ್ಕಳನ್ನು ಹುಡುಕುತ್ತಿದ್ದವು. ಅವರ ಮಾತುಕತೆ ಎಲ್ಲಾ ಕೃಷಿ, ಟ್ರ್ಯಾಕ್ಟರು, ಮಳೆ ಮತ್ತು ಟ್ಯಾಕ್ಸ್‌ಗಳ ಕುರಿತಾಗಿಯೇ ಇತ್ತು. ಅವರೆಲ್ಲಾ ಮಕ್ಕಳು ರಾಶಿ ಮಾಡಿದ್ದ ಕಲ್ಲುಗಳನ್ನು ದಾಟಿ ಮುಂದೆ ಬಂದಿದ್ದರು. ಗಂಡಸರು ಬಂದು ಸೇರಿದ ನಂತರ ಹೆಣ್ಣು ಮಕ್ಕಳು ತಮ್ಮ ದೈನಂದಿನ ಉಡುಗೆ ತೊಡುಗೆಗಳಲ್ಲೇ ಬಂದು ಸೇರತೊಡಗಿದರು. ಬೇರೆ ಹೆಣ್ಣು ಮಕ್ಕಳ ಜತೆಗೆ ಕೆಲವು ಮಾತುಗಳನ್ನಾಡುತ್ತಾ, ನಗಾಡುತ್ತಾ ತಂತಮ್ಮ ಗಂಡಂದಿರನ್ನು ಹುಡುಕುತ್ತಾ ಮುಂದಕ್ಕೆ ನಡೆಯತೊಡಗಿದರು. ಅಲ್ಲಿಂದ ತಂತಮ್ಮ ಮಕ್ಕಳನ್ನು ಹತ್ತಿರಕ್ಕೆ ಕರೆಯತೊಡಗಿದರು. ನಾಲ್ಕೈದು ಬಾರಿ ಕೂಗಿದ ಮೇಲೆಯೇ ಮಕ್ಕಳು ಮುಖ ಸಣ್ಣಗೆ ಮಾಡಿ ಕಾಲೆಳೆದುಕೊಂಡು ಬರತೊಡಗಿದರು. ತಾಯಿಯ ತೆರೆದ ಬಾಹುಗಳಿಂದ ತಪ್ಪಿಸಿಕೊಂಡು ಬಾಬ್ಬಿ ತನ್ನ ಕಲ್ಲು ರಾಶಿಯ ಕಡೆಗೆ ಓಡತೊಡಗಿದ. ತಂದೆ ಗದರಿಸಿದಾಗ ಬಾಲ ಮುದುರಿಕೊಂಡು ಬಂದು ಅವರ ಜೊತೆಗೆ ಸೇರಿಕೊಂಡ.

ಊರ ಮಧ್ಯದ ಚೌಕದಲ್ಲಿ ಲಾಟರಿ ಎತ್ತುವುದು ಮಾತ್ರವಲ್ಲದೆ ಊರಿನ ಯುವ ಮಂಡಳಿ ನೃತ್ಯ, ಸಂಗೀತ ಮಾತ್ರವಲ್ಲದೆ ಮಿಸ್ಟರ್ ಸಮ್ಮರ್ಸ್ ಹ್ಯಾಲೊವಿನ್ ಕಾರ್ಯಕ್ರಮವನ್ನೂ ನಡೆಸುತ್ತಿದ್ದರು. ಇದನ್ನು ನಡೆಸಲು ಬೇಕಾದ ಸಂಘಟನಾ ಚತುರತೆ ಮತ್ತು ಬಿಡುವು ಅವರಿಗೆ ಧಾರಾಳವಾಗಿತ್ತು. ಮಿಸ್ಟರ್ ಸಮ್ಮರ್ಸ್ ವಿನೋದ ಸ್ವಭಾವದ ವ್ಯಕ್ತಿಯಾಗಿದ್ದರು. ಅವರಿಗೆ ಮಕ್ಕಳಿರಲಿಲ್ಲ. ಆದರೆ ಅವರ ಹೆಂಡತಿ ಮಾತ್ರ ಅವರ ಸ್ವಭಾವಕ್ಕೆ ವಿರುದ್ಧವಾಗಿ ಮಹಾ ಗಯ್ಯಾಳಿಯಾಗಿದ್ದಳು. ಈ ಕಾರಣದಿಂದಾಗಿ ಅವರ ಮೇಲೆ ಪ್ರತಿಯೊಬ್ಬರಿಗೂ ಅನುಕಂಪವಿತ್ತು. ಮಿಸ್ಟರ್ ಸಮ್ಮರ್ಸ್ ಒಂದು ಕಪ್ಪು ಪೆಟ್ಟಿಗೆಯನ್ನು ಹೊತ್ತುಕೊಂಡು ಜನಜಂಗುಳಿಯ ಮಧ್ಯೆ ದಾರಿ ಮಾಡಿಕೊಂಡು ಬಂದಾಗ ಜನರ ಮಧ್ಯೆ ಗುಸುಗುಸು ಆರಂಭವಾಯಿತು. “ಸ್ವಲ್ಪ ತಡವಾಯಿತು ಸ್ನೇಹಿತರೇ..” ಎನ್ನುತ್ತಾ ಜನರೆಡೆಗೆ ಕೈಬೀಸಿದರು. ಮಿಸ್ಟರ್ ಸಮ್ಮರ್ಸ್‌ರ ಹಿಂದೆಯೇ ಮೂರು ಕಾಲಿನ ಒಂದು ಸ್ಟೂಲನ್ನು